ಕವಿ ಬೇಂದ್ರೆಯವರ ಲೋಕದೃಷ್ಟಿ ಭಿನ್ನವಾದುದು. ಲೌಕಿಕರ ಕಣ್ಣಿಗೆ ಕಾಣುವ ಚರಾಚರವಸ್ತುಗಳನ್ನೆಲ್ಲ ತಮ್ಮ ಕಾವ್ಯಕನ್ನಡಕದ ಮೂಲಕ ವೀಕ್ಷಿಸಿ ಹೊಸ ಅರ್ಥ, ಹೊಸ ನಾದ ಟಂಕಿಸಿದವರು. ಮಂಜಿನಹನಿಗಳನ್ನು ಮುತ್ತಿನ ಮಾಲೆಯಾಗಿ ಕಂಡು, ಬಂಗಾರವನ್ನು ಅಂಗಾರವಾಗಿ ಅಪಮೌಲ್ಯಗೊಳಿಸಿದವರು. ಒಂದರ ತುಚ್ಛೀಕರಣವೂ ಮತ್ತೊಂದರ ಮೆಚ್ಚೀಕರಣವೂ ಬೇಂದ್ರೆ ಸ್ಪೆಷಾಲಿಟಿ.

ನಮ್ಮ ಬೇಂದ್ರೆ ಕವಿವರಗೆ ಸುಣ್ಣವೇಕೊ ಕಣ್ಣಿಗೆ ಬೀಳಲಿಲ್ಲ. ಅದೇನಾದರೂ ಅವರ ಕಣ್ಣಿಗೆ ಬಿದ್ದಿದ್ದರೆ, ಬೆಣ್ಣೆಯನ್ನಾಗಿಯೋ ಇಲ್ಲ ಕವಣಿ ಕಲ್ಲಾಗಿಯೋ ವರ್ಣಿಸುತ್ತಿದ್ದರೆಂಬುದುನ್ನು ಊಹಿಸಿಕೊಳ್ಳುತ್ತ... ನಾನೀಗ ನಿಮಗೆ ಸುಣ್ಣಾಟವೊಂದನ್ನು ತೋರಿಸುವ (ವ್ಯರ್ಥ) ಪ್ರಯತ್ನದಲ್ಲಿ ಪೆನ್ನೋಡಿಸುತ್ತಿರುವೆ...

ನನ್ನ ಮತ್ತು ಸುಣ್ಣದ ನಡುವಿನ ಪ್ರೇಮಕ್ಕೀಗ ಸುವರ್ಣ ಸಂಭ್ರಮ. ಐದು ದಶಕಗಳಿಂದ ಹರಳುಗಟ್ಟಿರುವ ಲಂಗೋಟಿ ದೋಸ್ತಿ ನಮ್ಮದು. ಈಗಲೂ ನಿತ್ಯ, ಅದೇ ಸುಣ್ಣವಂಶದ ಚಾಕ್‌ಪೀಸ್‌ನೊಂದಿಗೆ, ಸ್ನೇಹದ ಇಡುಗಂಟು ಜೋಪಾನವಾಗಿರಿಸಿಕೊಂಡು ಬಂದಿರುವ ನಂದು ಮಾಸ್ತರಿಕೆ ಕಾಯಕ.

ಹೌದು, ತನ್ನ ಒಡಲೊಳಗೆ ಸಪ್ತವರ್ಣಗಳ ಸಿರಿಯನ್ನಿಟ್ಟುಕೊಂಡು, ಸಂತನಂತೆ ಶಾಂತವೂ ಶುಭ್ರವೂ ಆಗಿರುವ ಸುಣ್ಣದ ಸ್ವಾತಿಕ ಗುಣವನ್ನೇನಾದರೂ ನೀವು ಗಮನಿಸಿದ್ದೀರಾ! ಗುಣವೂ ಘನ, ಅದರ ಪರಿಣಾಮವೂ ಘನ.


ದಸರಾ ಹಬ್ಬ ಹಿಂದಕ್ಕೆ ಸರಿದು, ದೀಪಾವಳಿ ಮೆಲ್ಲಗೆ ಕಾಲಿಡುತ್ತಿದ್ದಂತೆಯೇ, ಆಗ ಹುಡುಗರಾಗಿದ್ದ ನಮಗೆ 'ಸುಣ್ಣಾಟದ ಜ್ವರ' ಸಣ್ಣಗೆ ಏರತೊಡಗುತ್ತಿತ್ತು. ನಾಲ್ವತ್ತೈದು ಬೈ ಎಂಬತ್ತು ಅಡಿ ಉದ್ದಗಲದ, ಟೂರಿಂಗ್ ಟಾಕೀಸ್‌ನಂತಿದ್ದ ನಮ್ಮ ಹಳ್ಳಿ ಮನೆಗೆ ಸುಣ್ಣ ಬಳಿಯುವ ವಾರ್ಷಿಕ ಕಾರ್ಯಾಚರಣೆಗೆ ಮನೆಮಂದಿಯೆಲ್ಲ ಮುಂದಾಗುವ ಸಮಯ ಅದು.

ಕಾರ್ಯಾಚರಣೆಯ ಎರಡು ದಿನ ಮುಂಚಿತವಾಗಿ, ನೆರೆ ರಾಮಪುರದ ಸುಣ್ಣಗಾರರ ಮನೆಯತ್ತ ನಮ್ಮ ಸೈಕಲ್ ಸವಾರಿ. ಇಪ್ಪಿಪ್ಪತ್ತು ಕೆ.ಜಿ. ಎರಡು ಚೀಲ ಭರ್ತಿ ಸುಣ್ಣದ ಹರಳು ತೂಗಿಸಿಕೊಳ್ಳುತ್ತಿದ್ದವು. 'ಛಲೋ ಅಂಥಾದ್ದು ತರ್ಬೇಕು, ತೀರಾ ಹಳ್ಳಾ (ಹರಳು) ಸಣ್ಣಗೂ ಇರಬಾರ್ದು, ಹಂಗಂತ ಹೆಗ್ಗಣದಾಂಗ್ ಹೂಂ ಅಂತ ದೊಡ್ಡದೂನು ಇರಬಾರ್ದು. ಚೌಕಾಸಿ ಮಾಡ್ರಿ, ತೂಕದಾಗ ಅವ್ರು ಮೋಸಾ ಮಾಡ್ತಾರ, ಹುಷಾರಿರಬೇಕು' ಎಂದೆಲ್ಲ ಅಜ್ಜಿಯ ಮುನ್ನೆಚ್ಚರಿಕೆ ಮಾತುಗಳು. ಮತ್ತೆ, 'ಹಾಂ,...! ಅದರಾಗ ಕಲ್ಲುಪಲ್ಲು ಸೇರಿರಬಾರ್ದು, ಬರೀ ಹುಡಿಹುಡಿನೇ ತುಂಬಿರಬಾರ್ದು... ಛಲೊ ಇಲ್ಲಿಕ್ಕಂದ್ರ ವಾಪಸ್ಸು ತಂದು ನಿಮ್ಮ ಮನೀ ಮುಂದ ಸುರೀತೀವಿ. ಅಂತ್ಹೇಳಿ ಬರ್‍ರೀ...' ಅಜ್ಜಿ ಮನೆಯಲ್ಲಿ ಮಾಡಿಸುತ್ತಿದ್ದ ರಿಹರ್ಸಲ್, ಅಲ್ಲಿ ಸುಣ್ಣಗಾರರ ಮನೆಯಲ್ಲಿ ಡಿಟ್ಟೋ ಆಗಿ ಬಾಯಿಪಾಠ ಒಪ್ಪಿಸುತ್ತಿದ್ದರೆ...

ಇದೆಲ್ಲಾ ಮಾಮೂಲಿ ವರಸೆ ಅಂದ್ಕೊಂಡ, ಆ ಸುಣ್ಣಗಾರ ಮನೆಯ ಹೆಂಗಸ್ರು, 'ನೋಡೆರೇ ನೋಡ್ರಿ ಸಾವುಕಾರ್‍ರಾ... ಈ ಸಲದ್ದು ಹ್ಯಾಂಗದ ಅಂತೀರೀ..., ಬೆಣ್ಣಿ... ಬೆಣ್ಣೀ ಇದ್ದಂಗದ...' ಎಂದು ಮುಖದ ತುಂಬ ನಗೆ ತುಂಬಿಕೊಂಡು, ತೂಗಿ ಕೊಡೋರು. ಆದರೂ, ಯಥಾಪ್ರಕಾರ, ಅದರಲ್ಲಿ ಹರಳುಗಳು, ಅರೆಸುಟ್ಟ ಕಲ್ಲುಚೂರುಗಳು ಸೇರಿರುವುದು ಮಾಮೂಲಿಯಾಗಿದ್ದು, ತಂದ ಸುಣ್ಣ ನೀರಿಗೆ ಅಟ್ಟ ಮೇಲೆಯೇ ನಾವು ಮೋಸಹೋಗಿದ್ದು ಜಾಹೀರಾಗುತ್ತಿತ್ತು. 'ಅರೆರೆ! ಹೌಂದಲ್ಲಾ, ಮತ್ತೊಮ್ಮೆ ಮೋಸ ಮಾಡಿದರಲ್ಲಾ ಛೇ!' ನಮ್ಮ ಹಳಹಳಿಕೆಗೆ, 'ಕಡೀಕೂ ನಿಮಗ ವ್ಯವಾರ ನ್ಯಾನ (ಜ್ಞಾನ) ಬರ್‍ಲಿಲ್ಲ ತುಗೋರಿ' ಎಂದು ಛೇಡಿಸುತ್ತ, ಎಂದೆಂದೂ ಇವು ಉದ್ಧಾರಾಗೊ ಇಸ್ಸಮುಗಳಲ್ಲ, ಎಂಬುದು ಅಜ್ಜಿಯ ಕಮೆಂಟ್. 'ನೋಡ್ತಿರೆ ನೋಡಜ್ಜಿ, ಮುಂದಿನ ವರ್ಷ, ಹೆಂಥಾದ್ದು ತರ್ತೀವು ಅಂತಂದ್ರ...' ಎಂಬ ನಮ್ಮ ಆಶ್ವಾಸನೆ ಅದರ ಮುಂದಿನ ವರ್ಷವೂ ಎಂದಿನ ಹಾಗೆ ಹುಸಿ ಹೋಗುತ್ತಿತ್ತು, ಇದು 'ಸುಣ್ಣಾಟ'ದ ಮೊದಲ ಅಂಕ.

***

ಮನೆಯಲ್ಲಿ ವರ್ಷವಿಡೀ ಶೇಖರಣೆಗೊಂಡಿರುತ್ತಿದ್ದ ಯಮಧೂಳಿಗೆ ಶಾಸ್ತ್ರೋಕ್ತ ವಿದಾಯ ಹೇಳುವ 'ಧೂಳ ಹಟಾವೋ' ಅದರ ಎರಡನೆಯ ಅಂಕ. ಆಪರೇಶನ್‌ಗೆ ಸಜ್ಜಾದ



**ಸುಣ್ಣವೆಂದರೇನು? ಗೋಡೆಯ ಮೇಲಿನ ಬಿಳಿಯ ಬಣ್ಣವಷ್ಟೇ. ಅಷ್ಟೇ ಅಲ್ಲ ಎನ್ನುವ ಪ್ರಬಂಧಕಾರರು, 'ಸುಣ್ಣವೆಂಬುದು ಸತ್ಯಾನುಸಂಧಾನದ ಸಂಕೇತ' ಎಂದಿದ್ದಾರೆ. ಕಲ್ಲರಳಿ ಹೂವಾಗಿ, ಎಲ್ಲರಿಗೆ ಬೇಕಾಗಿ, ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗುವ ಸುಣ್ಣ ಮಹಾತ್ಮನಿಗೊಂದು ಸೆಲ್ಯೂಟ್ ಹೇಳಿರುವ ಅವರು, 'ಸುಣ್ಣಮೇವ ಜಯತೆ' ಎನ್ನುವ ಘೋಷವಾಕ್ಯವನ್ನೂ ಟಂಕಿಸಿದ್ದಾರೆ.**